## ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು.

**ಎಸ್.ಸಿ. ಸಂಖ್ಯೆ 93/2021**

| | | |
|---|---|---|
| ಸಾಕ್ಷಿದಾರರ ಹೆಸರು | : ಅಜರುದ್ದೀನ್ | ಪಿಡಬ್ಲ್ಯೂ : 28 |
| ತಂದೆಯ / ಗಂಡನ ಹೆಸರು | : ಇಲಿಯಾಸ್ ಉದೀನ್ | ಸಿಡಬ್ಲ್ಯೂ : 48 |
| ವಯಸ್ಸು | : 42 ವರ್ಷ | |
| ಉದ್ಯೋಗ | : ಆರಕ್ಷಕ ನಿರೀಕ್ಷಕರು , ಹೆಚ್ ಎ ಎಲ್ ಪೊಲೀಸ್ ಠಾಣೆ , ಬೆಂಗಳೂರು | |
| ವಾಸಸ್ಥಳ | : ಬೆಂಗಳೂರು | |

**ಸಾಕ್ಷಿಯನ್ನು ಈ ದಿನ ದಿಃ 25.09.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

ಮುಖ್ಯ ವಿಚಾರಣೆ : ಮಾನ್ಯ ಸರ್ಕಾರಿ ಅಭಿಯೋಜಕರಿಂದ

1. ನಾನು ದಿ.27.11.2020 ರಿಂದ 27.01.2023 ರ ರವರೆಗೆ ನರಸಿಂಹರಾಜ ಪೊಲೀಸ್ ಠಾಣೆ ಪಿಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿ.15.12.2020 ರಂದು ಬೆಳಿಗ್ಗೆ 1130 ರ ಸುಮಾರಿಗೆ ಠಾಣಾಧಿಕಾರಿಯ ಕರ್ತವ್ಯದಲ್ಲಿದ್ದಾಗ ಚಾಸಾ.1 ರವರು ಠಾಣೆಗೆ ಹಾಜರಾಗಿ ಲಿಖಿತ ದೂರನ್ನು ಹಾಜರುಪಡಿಸಿದ್ದು, ಸದರಿಯವರ ದೂರನ್ನು ಸ್ವೀಕರಿಸಿ ಠಾಣಾ ಮೊಕದ್ದಮೆ ಸಂಖ್ಯೆ 203/20 ರಲ್ಲಿ ಕಲಂ 302 ಐಪಿಸಿ ಅಡಿ ಪ್ರಕರಣವನ್ನು ದಾಖಲಿಸಿ ಪ್ರ.ವ.ವ. ಯನ್ನು ಮಾನ್ಯ ನ್ಯಾಯಾಲಯಕ್ಕೆ ಮತ್ತು ಮೇಲಾಧಿಕಾರಿಗೆ ನಿವೇದಿಸಿಕೊಂಡಿರುತ್ತೇನೆ. ಸಾಕ್ಷಿಯೂ

ದೂರನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ.1 ಎಂದು, ಸಾಕ್ಷಿಯ ಸಹಿಯನ್ನು ನಿಪಿ. 1(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಯೂ ಪ್ರ.ವ.ವ ಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ. 69 ಎಂದು , ಸಾಕ್ಷಿಯ ಸಹಿಯನ್ನು ನಿಪಿ. 69(ಎ) ಎಂದು ಗುರುತಿಸಲಾಯಿತು.

3. ನಂತರ ಅದೇ ದಿನ ಘಟನಾ ಸ್ಥಳವಾದ ಕೆಸರೆ ಕುರಿಮಂಡಿ , ಎ ಬ್ಲಾಕ್ ನ ನರಂ ಯೋಜನೆಯಡಿ ನಿರ್ಮಿಸಿದ ಕಟ್ಟಡದ ಸಂಕೀರ್ಣದ ಒಂದನೇ ಮಹಡಿಯ ಮನೆ ನಂಬರ್ 50 ಕ್ಕೆ ಭೇಟಿ ನೀಡಿ , ಸದರಿ ಸ್ಥಳವನ್ನು ಪರಿಶೀಲಿಸಿ , ಫಿಂಗರ್ ಪ್ರಿಂಟ್ ಮತ್ತು ಶ್ವಾನದಳ ಕರೆಸಿ , ಪರಿಶೀಲನೆಗೆ ಒಳಪಡಿಸಿರುತ್ತೇನೆ.

4. ನಾನು ಸ್ಥಳಕ್ಕೆ ಭೇಟಿ ನೀಡಿದಾಗ ಅಲ್ಲಿ ಮೃತ ರವಿಯ ಮೃತದೇಹ ಅಂಗಾತವಾಗಿ ಬಿದ್ದಿದ್ದು, ಅಲ್ಲಲ್ಲಿ ಮಧ್ಯಪಾನ ಪ್ಯಾಕೆಟ್ ಗಳು , ವಾಟರ್ ಬಾಟಲ್ , ಖಾಲಿ ಗ್ಲಾಸ್ , ಪ್ಲಾಸ್ಟಿಕ್ ಗ್ಲಾಸ್ ಧ್ರಾವಣ ವಿದ್ದು ಕಂಡು ಬಂದಿತ್ತು. ಸದರಿ ಕೋಣೆಯು ಚೆಲ್ಲಾಪಿಲ್ಲಿಯಾದಂತೆ ಕಂಡಿರುತ್ತದೆ. ಮೃತನ ನಾಲಿಗೆ ಹೊರಗಡೆ ಬಂದಿದ್ದು, ಎಡ ತೋಡೆಯ ಬಳಿ ಕತ್ತರಿಸಿದ ಗಾಯ ಇತ್ತು. ಸದರಿ ಸ್ಥಳದಲ್ಲಿ ಶವ ತನಿಖಾ ಮತ್ತು ಸ್ಥಳ ಪಂಚನಾಮೆಯನ್ನು ಚಾಸಾ.1 ರವರು ತೋರಿಸಿದಂತೆ, ಚಾಸಾ.6 ರಿಂದ 8 ರವರ ಸಮಕ್ಷಮ ಮದ್ಯಾಹ್ನ 01.00 ಗಂಟೆಯಿಂದ 03.00 ಗಂಟೆಯವರೆಗೆ ಜರುಗಿಸಿರುತ್ತೇನೆ. ಸದರಿ ಕಾಲದಲ್ಲಿ ಛಾಯಾಚಿತ್ರಗಳನ್ನು ಸಹ ತೆಗೆಸಿರುತ್ತೇನೆ. ಸಾಕ್ಷಿಯೂ ಮಹಜರ್ ನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ.19 ಎಂದು , ಸಾಕ್ಷಿಯ ಸಹಿಯನ್ನು ನಿಪಿ.19(ಬಿ) ಎಂದು ಗುರುತಿಸಲಾಯಿತು.

5. ಸಾಕ್ಷಿಯೂ 12 ಪೋಟೋಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಈಗಾಗಲೇ ನಿಪಿ. 2 ರಿಂದ 13 ಎಂದು ಗುರುತಿಸಲಾಗಿರುತ್ತದೆ. ಸದರಿ ಮಹಜರ್ ಕಾಲದಲ್ಲಿ, ಸ್ಥಳದಲ್ಲಿ ದೊರೆತ 11 ವಸ್ತುಗಳನ್ನು ಅಮಾನತ್ತುಪಡಿಸಿಕೊಂಡಿರುತ್ತೇನೆ. ನಂತರ ಅವುಗಳನ್ನು ಠಾಣಾ ಮಾಲು ಪಟ್ಟಿ ಸಂಖ್ಯೆ 159/20 ರಲ್ಲಿ ಅಳವಡಿಸಿರುತ್ತೇನೆ. ಸಾಕ್ಷಿಯೂ ಎಂಒ-1 ರಿಂದ 10 ನ್ನು ನೋಡಿ ಗುರುತಿಸಿರುತ್ತಾರೆ. ಒಂದು ಪ್ಲಾಸ್ಟಿಕ್ ಕಂಟೇನರ್ ನಲ್ಲಿ ಇದ್ದ, ಧ್ರಾವಣವನ್ನು ಎಫ್ ಎಸ್ ಎಲ್ ಗೆ ಕಳುಹಿಸಿದ್ದು, ಅದನ್ನು ವಾಪಾಸ್ ನೀಡಿರುವುದಿಲ್ಲ.

6. ಮೃತನಿಗೆ ಸಂಬಂಧಿಸಿದ ವಾರಸುದಾರರು ಯಾರು ಕೂಡ ಬಂದಿರುವುದಿಲ್ಲ . ಆ ಕಾರಣದಿಂದ ಮೃತ ದೇಹವನ್ನು ಜೆ ಎಸ್ ಎಸ್ ಆಸ್ಪತ್ರೆಯ ಶವಾಗಾರಕ್ಕೆ ಕಳುಹಿಸಿ , ಅದನ್ನು ಶೈತ್ಯಾಗಾರದಲ್ಲಿ ಇಟ್ಟು, ಜೆ ಎಸ್ ಎಸ್ ಆಸ್ಪತ್ರೆಯ **forensic** ವಿಭಾಗದವರಿಗೆ ವಹಿಸಿಕೊಟ್ಟಿರುತ್ತೇನೆ.

7. ಅದೇ ದಿನ ಚಾಸಾ.2 ರಿಂದ 5 ರವರ ಹೇಳಿಕೆಗಳನ್ನು ದಾಖಲಿಸಿಕೊಂಡಿರುತ್ತೇನೆ. ಚಾಸಾ.3 ರವರು ನನ್ನ ಮುಂದೆ ನಿಪಿ.18 ಮತ್ತು 18(ಎ) ದಂತೆ ಹೇಳಿಕೆಯನ್ನು ನೀಡಿರುತ್ತಾರೆ.

8. ದಿ.16.12.2020 ರಂದು ಜೆ ಎಸ್ ಎಸ್ ಆಸ್ಪತ್ರೆಯ ಶವಾಗಾರಕ್ಕೆ ಭೇಟಿ ನೀಡಿ , ಮೃತನ ತಂದೆ ಮತ್ತು ಸಂಬಂಧಿಕರು ಬಂದ ಮೇರೆಗೆ ಮೃತದೇಹವನ್ನು ತೋರಿಸಿ, ಚಾಸಾ.10, 11, 12 ರವರ ಹೇಳಿಕೆಗಳನ್ನು ಪಡೆದು, ಮರಣೋತ್ತರ ಪರೀಕ್ಷೆಯ ನಂತರ ಶವವನ್ನು ತಂದೆಗೆ ನೀಡಿ ಸ್ವೀಕೃತಿಯನ್ನು ಪಡೆದುಕೊಂಡಿರುತ್ತೇನೆ.

9. ಅದೇ ದಿನ ಚಾಸಾ.13 ರವರು ಕೃತ್ಯ ನಡೆದ ಸ್ಥಳ , ಶವ ತನಿಖಾ ವರದಿ ಮತ್ತು ಸ್ಥಳ ಪಂಚನಾಮೆ ಕಾಲಕ್ಕೆ ತೆಗೆದ ಪೋಟೋಗಳಿಗೆ ಸಂಬಂಧಪಟ್ಟಂತೆ ಹೇಳಿಕೆಗಳನ್ನು

ಪಡೆದುಕೊಂಡು, ಅವರು ಫೋಟೋಗಳನ್ನು ನೀಡಿದ್ದು, ಅವರಿಂದ ಕಲಂ 65(ಬಿ) ಅಡಿಯ ಪ್ರಮಾಣ ಪತ್ರವನ್ನು ಸಹ ಪಡೆದುಕೊಂಡಿರುತ್ತೇನೆ. ಸಾಕ್ಷಿಯೂ ಪ್ರಮಾಣ ಪತ್ರವನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ.21 ಎಂದು ಗುರುತಿಸಲಾಗಿದ್ದು , ಸಾಕ್ಷಿಯ ಸಹಿಯನ್ನು ನಿಪಿ. 21(ಬಿ) ಎಂದು ಗುರುತಿಸಲಾಯಿತು.

10. ದಿ.18.12.2020 ರಂದು ಈ ಪ್ರಕರಣದ ಆರೋಪಿಗಳನ್ನು ಪತ್ತೆ ಮಾಡುವಂತೆ ಚಾಸ.40 ರಿಂದ 42 ರವರನ್ನು ನೇಮಕ ಮಾಡಿದ್ದ, ಅವರು ನನ್ನ ಆದೇಶದ ಮೇರೆಗೆ ಅದೇ ದಿನ ಬೆಳಿಗ್ಗೆ 08.00 ಗಂಟೆ ಹಳೇ ಕೆಸರೆ, ಅತಿಥಿ ಆರಾಧನಾ ರೆಸಾರ್ಟ್ ಮುಂಭಾಗ ಈ ಪ್ರಕರಣದ 2 ಮತ್ತು 3 ನೇ ಆರೋಪಿತರನ್ನು , ನೊಂದಣಿ ಸಂಖ್ಯೆ **KA** 55 **EA** 2839 ದ್ವಿಚಕ್ರ ವಾಹನದ ಸಮೇತ ವಶಕ್ಕೆ ಪಡೆದುಕೊಂಡು ಅವರನ್ನು ಬೆಳಿಗ್ಗೆ 08.30 ರ ಸುಮಾರಿಗೆ ನನ್ನ ಮುಂದೆ ಹಾಜರುಪಡಿಸಿರುತ್ತಾರೆ. ಸದರಿ ಆರೋಪಿತರನ್ನು ವಿಚಾರಣೆ ಮಾಡಿ, ಅವರು ವಿಚಾರಣಾ ಕಾಲದಲ್ಲಿ ತಮ್ಮ ತಪ್ಪನ್ನು ಒಪ್ಪಿಕೊಂಡು, ಸ್ವಇಚ್ಛಾ ಹೇಳಿಕೆಯನ್ನು ನೀಡಿರುತ್ತಾರೆ. ಸದರಿ ಆರೋಪಿತರು ತಮ್ಮ ಸ್ವ ಇಚ್ಛಾ ಹೇಳಿಕೆಯಲ್ಲಿ ಮೃತನನ್ನು ಕೊಲೆ ಮಾಡುವ ಮೊದಲು ಮತ್ತು ನಂತರ ಸದರಿ ವಾಹನವನ್ನು ಕೊಲೆ ಮಾಡುವ ಮುಂಚೆ ಮಧ್ಯವನ್ನು ತರಲು ಮತ್ತು ಕೊಲೆಯಾದ ನಂತರ ತಪ್ಪಿಸಿಕೊಂಡು ಹೋಗಲು ಉಪಯೋಗಿಸಿದ್ದರ ಬಗ್ಗೆ ಹೇಳಿದ್ದು, ನಂತರ ಸದರಿ ದ್ವಿಚಕ್ರ ವಾಹನವನ್ನು ಚಾಸಾ.17 ಮತ್ತು 18 ರವರ ಸಮಕ್ಷಮ ಸಿಲ್ವರ್ ಬಣ್ಣದ ಸುಜುಕಿ ಆಕ್ಸಸ್ 125 **KA** 55 **EA** 2839 ವಾಹನವನ್ನು ಅಮಾನತ್ತುಪಡಿಸಿಕೊಂಡು ಠಾಣಾ ಮಾಲು ಪಟ್ಟಿ ಸಂಖ್ಯೆ 160/20 ರಲ್ಲಿ ಅಳವಡಿಸಿ ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಸಾಕ್ಷಿಯೂ ಅಮಾನತ್ತು ಮಹಜರ್ ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ. 25

ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ.25(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಯೂ ದ್ವಿಚಕ್ರ ವಾಹನದ ಪೋಟೋಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ನಿಪಿ.26 ರಿಂದ 28 ಎಂದು ಗುರುತಿಸಲಾಗಿದೆ.

11. 2 ನೇ ಆರೋಪಿಯು ತನ್ನ ಸ್ವ ಇಚ್ಚಾ ಹೇಳಿಕೆಯಲ್ಲಿ, ಕುರಿಮಂಡಿ ಗೇಟ್ ಬಳಿ ಗಲಾಟೆ ಆದ ಸ್ಥಳವನ್ನು ಮತ್ತು ಕೊಲೆ ಮಾಡಿದ ಜಾಗವನ್ನು ತೋರಿಸುತ್ತೇನೆ ಎಂದು ಹೇಳಿರುತ್ತಾನೆ. ಸದರಿ ಹೇಳಿಕೆಯ ಭಾಗವನ್ನು ನಿಪಿ.70 ಎಂದು , ಸಾಕ್ಷಿಯೂ ಸಹಿಯನ್ನು ನಿಪಿ.70(ಎ) ಗುರುತಿಸಲಾಯಿತು. ಪಂಚರಾದ ಮಣಿಕಂಠ ಮತ್ತು ಶಂಕರ್ ರವರನ್ನು 2 ನೇ ಆರೋಪಿಯ ಸ್ವಇಚ್ಚಾ ಹೇಳಿಕೆಯ ವಿಚಾರವನ್ನು ತಿಳಿಸಿ, ಅವರನ್ನು ಪಂಚರಾಗುವಂತೆ ಕೇಳಿಕೊಂಡು, ಅದಕ್ಕೆ ಅವರು ಒಪ್ಪಿದ ನಂತರ, ಅವರ ಜೊತೆ ಇಲಾಖಾ ವಾಹನದಲ್ಲಿ ಹೊರಟು, 2 ನೇ ಆರೋಪಿಯು ನಮ್ಮನ್ನು ಕರೆದುಕೊಂಡು , ಕುರಿಮಂಡಿಯ, ನರಮ್ ಎ ಬ್ಲಾಕ್ ನ , ಒಂದನೇ ಮಹಡಿಯ ಮನೆಯ ನಂ.50 ನ್ನು ತೋರಿಸಿದ್ದು, ಅಲ್ಲಿ ಮೃತ ರವಿಯನ್ನು, ಉಳಿದ 1 ಮತ್ತು 3 ನೇ ಆರೋಪಿತರ ಜೊತೆ ಸೇರಿ ಕೊಲೆ ಮಾಡಿದ ಸ್ಥಳ ಎಂದು ತೋರಿಸಿದ್ದು, ಸದರಿ ಸ್ಥಳದಲ್ಲಿ ಮಹಜರ್ ನ್ನು ಮದ್ಯಾಹ್ನ 01.30-02.30 ರವರೆಗೆ ಪಂಚರ ಸಮಕ್ಷಮ ಜರುಗಿಸಿರುತ್ತೇನೆ. ಸಾಕ್ಷಿಯೂ ಮಹಜರ್ ನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ.71 ಎಂದು, ಸಾಕ್ಷಿಯ ಸಹಿಯನ್ನು ನಿಪಿ. 71(ಎ) ಎಂದು ಗುರುತಿಸಲಾಯಿತು.

12. ನಂತರ ದಿ.14.12.2020 ರಂದು 2 ನೇ ಆರೋಪಿ ನಮ್ಮನ್ನು ಕೊಲೆಯಾಗುವ ಮೊದಲು, 1 ನೇ ಆರೋಪಿ ಮತ್ತು ಮೃತನಿಗೆ ಜಗಳವಾದ ಸ್ಥಳವನ್ನು ತೋರಿಸುತ್ತೇನೆ ಎಂದು ಹೇಳಿ, ನಮ್ಮನ್ನು ಕುರಿಮಂಡಿ ಕಸಾಯಿಖಾನೆಯ ಮುಖ್ಯದ್ವಾರದ ಬಳಿ

ಕರೆದುಕೊಂಡು ಹೋಗಿ, ಇದೇ ಸ್ಥಳದಲ್ಲಿ ಜಗಳವಾಗಿರುತ್ತದೆ ಎಂದು ಮತ್ತು ಮೃತನನ್ನು ಕೊಲೆ ಮಾಡಲು ನಿರ್ಧರಿಸಿ , ಸಂಚು ಮಾಡಿದ ಸ್ಥಳ ಇದೇ ಎಂದು ತೋರಿಸದ ಮೇರೆಗೆ ಸ್ಥಳದಲ್ಲಿ ಪಂಚರಾದ ಮಣಿಕಂಠ ಮತ್ತು ಶಂಕರ್ ರವರ ಸಮಕ್ಷಮ ಮಹಜರ್ ನ್ನು ಮಧ್ಯಾಹ್ನ 03.00-03.30 ರವರೆಗೆ ಜರುಗಿಸಿರುತ್ತೇನೆ. ಸಾಕ್ಷಿಯೂ ಮಹಜರ್ ನ್ನು ನೋಡಿ ಗುರುತಿಸಿದ್ದು, ಸದರಿ ದಾಖಲೆಯನ್ನು ನಿಪಿ.72 ಎಂದು, ಸಾಕ್ಷಿಯ ಸಹಿಯನ್ನು ನಿಪಿ.72(ಎ) ಎಂದು ಗುರುತಿಸಲಾಯಿತು.

13. ನಂತರ ವಾಪಾಸ್ ಠಾಣೆಗೆ ಬಂದು ದಸ್ತಗಿರಿ ನಿಯಮವನ್ನು ಪಾಲಿಸಿ , 2 ಮತ್ತು 3 ನೇ ಆರೋಪಿತರನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ.

14. ನಂತರ ದಿ.22.12.2020 ರಂದು ಜೆ ಎಸ್ ಎಸ್ ಆಸ್ಪತ್ರೆಯಿಂದ ಮೃತನ ಪ್ರಾಥಮಿಕ ಮರಣೋತ್ತರ ಪರೀಕ್ಷೆಯ ವರದಿಯನ್ನು ಮತ್ತು ವಿಸ್ರಾ ವನ್ನು ಹೆಚ್ ಸಿ ಶ್ರೀಕಂಠ (ಚಾಸಾ.44)ರವರು ತಂದು ಹಾಜರುಪಡಿಸಿದ್ದು, ಅದನ್ನು ಸ್ವೀಕರಿಸಿರುತ್ತೇನೆ. ವಿಸ್ರಾವನ್ನು ಠಾಣಾ ಮಾಲು ಪಟ್ಟಿ ಸಂಖ್ಯೆ 166/20 ರಲ್ಲಿ ಅಳವಡಿಸಿ ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಸಾಕ್ಷಿಯೂ ಪ್ರಾಥಮಿಕ ಮರಣೋತ್ತರ ಪರೀಕ್ಷೆಯನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ.46 ಎಂದು, ಸಾಕ್ಷಿಯ ಸಹಿಯನ್ನು ನಿಪಿ.46(ಬಿ) ಎಂದು ಗುರುತಿಸಲಾಯಿತು.

15. ನಂತರ ದಿ.24.12.2020 ರಂದು ಚಾಸಾ.14 ರವರ ಹೇಳಿಕೆಯನ್ನು ದಾಖಲಿಸಿಕೊಂಡಿರುತ್ತೇನೆ. ಚಾಸಾ.14 ರವರು ತಮ್ಮ ಹೇಳಿಕೆಯಲ್ಲಿ, ದಿ.14.12.2020 ರಂದು ರಾತ್ರಿ 10.15 ನಿಮಿಷಕ್ಕೆ, 1 ನೇ ಆರೋಪಿ ತನ್ನ ಮೊಬೈಲ್ ಸಂಖ್ಯೆ 8660343740 ನಂಬರ್ ನಿಂದ ಚಾಸಾ.14 ರವರ ಮೊಬೈಲ್ ಸಂಖ್ಯೆ 9972994028

ನಂಬರ್ ಗೆ ಕರೆ ಮಾಡಿ, ಆತನಿಗೆ ಕುರಿಮಂಡಿ ಸರ್ಕಲ್‌ನಲ್ಲಿರವ ಕಸಾಯಿಖಾನೆಯ ಮುಖ್ಯದ್ವಾರದ ಬಳಿ ಬರುವಂತೆ ತಿಳಿಸಿರುತ್ತಾನೆ. ಆ ಪ್ರಕಾರ ಆತ ರಾತ್ರಿ 10.25 ನಿಮಿಷಕ್ಕೆ ಸ್ಥಳಕ್ಕೆ ಬಂದಾಗ , 1 ರಿಂದ 3 ನೇ ಆರೋಪಿತರುಗಳು ಮತ್ತು ಮೃತ ರವಿ, 4 ಜನರು ಇದ್ದು, 1 ನೇ ಆರೋಪಿಯು ಸಾಕ್ಷಿ-14 ರವರಿಗೆ 2 ನೇ ಆರೋಪಿಯನ್ನು ತೋರಿಸಿ, ಈತನಿಗೆ ನಾಯಿ ಕಚ್ಚಿದೆ , ಆತನನ್ನು ಕೆ ಆರ್ ಆಸ್ಪತ್ರೆಗೆ ಕರೆದುಕೊಂಡು ಹೋಗು ಎಂದು ತಿಳಿಸಿರುತ್ತಾನೆ. ಚಾಸಾ-14, ಈಗ ಯಾವುದೇ ವೈದ್ಯರು ಇರುವುದಿಲ್ಲ. ಬೆಳಿಗ್ಗೆ ಕರೆದುಕೊಂಡು ಹೋಗುತ್ತೇನೆ ಎಂದು ತಿಳಿಸಿರುತ್ತಾನೆ. ಆ ಸಮಯದಲ್ಲಿ, ಇದೇ ವಿಚಾರಕ್ಕೆ 1 ನೇ ಆರೋಪಿ ಮತ್ತು ಮೃತನಿಗೆ ಜಗಳವಾಗಿ, ಸಾಕ್ಷಿ-14 ಬಿಡಿಸಲು ಹೋದಾಗ, ಮೃತನು ಚಾಸಾ.14 ರವರ ಕಪಾಳಕ್ಕೆ ಹೊಡೆದಿರುತ್ತಾನೆ. ನಂತರ ಚಾಸಾ.14 ರವರು ಸಮಾಧಾನಪಡಿಸಿಕೊಂಡು ನಂತರ ಕೆ ಆರ್ ಆಸ್ಪತ್ರೆಗೆ ಹೋಗಿರುತ್ತಾನೆ. ನಂತರ ದಿ.15.12.2020 ರಂದು ಬೆಳಗಿನ ಜಾವ 03.00 ಗಂಟೆ ಸುಮಾರಿಗೆ 1 ರಿಂದ 3 ನೇ ಆರೋಪಿತರು ಸಾಕ್ಷಿ-14 ರವರು ಕೆ ಆರ್ ಆಸ್ಪತ್ರೆಯ ಬಳಿ ಬಂದು, ಚಾಸಾ.14 ರವರನ್ನು ಎಬ್ಬಿಸಿ , ಮೃತ ರವಿಯನ್ನು ಮುಗಿಸಿರುತ್ತೇವೆ ಎಂದು 1 ನೇ ಆರೋಪಿ ತಿಳಿಸಿ , ಆತನ ವಾಟ್ಸ್ ಆಪ್ ಗೆ ಪೋಟೋ ಮತ್ತು ಮೆಸೇಜ್ ನ್ನು ಕಳುಹಿಸಿರುವುದಾಗಿ ತಿಳಿಸಿರುತ್ತಾನೆ ಎಂದು ಹೇಳಿರುತ್ತಾರೆ. ನಂತರ 1 ರಿಂದ 3 ನೇ ಅರೋಪಿತರು ಹೊರಟು ಹೋದ ನಂತರ ಚಾಸಾ.14 ನೆಟ್ ಆನ್ ಮಾಡಿ , ವಾಟ್ಸ್ ಆಪ್ ತೆಗೆದು ನೋಡಿದಾಗ, ಮೊಬೈಲ್ ನಲ್ಲಿ 1 ನೇ ಆರೋಪಿಯ ಹೆಸರನ್ನು 'ವಿನು ಅಣ್ಣ' ಎಂದು ದಾಖಲಿಸಿಕೊಂಡಿದ್ದು, ಅದನ್ನು ತೆಗೆದು ನೋಡಿದಾಗ, ಅದರಲ್ಲಿ ರವಿಯನ್ನು ಕೊಲೆ ಮಾಡಿ, ಪೋಟೋವನ್ನು ನೋಡಿ ಗಾಬರಿಯಾಗಿರುತ್ತಾನೆ ಎಂದು ಹೇಳಿಕೆ ನೀಡಿರುತ್ತಾನೆ, ಅದನ್ನು ದಾಖಲಿಸಿಕೊಂಡಿರುತ್ತೇನೆ.

ನಂತರ ಸದರಿ ಚಾಸಾ.14 ರವರ ವಿವ್ರೋ 1603 ಮೊಬೈಲ್ ನಿಂದ ಚಾಸಾ-44 ರವರ ಮೊಬೈಲ್ ಗೆ ಸದರಿ ಚಾಸಾ.14 ರವರ ಮೊಬೈಲ್ ನಲ್ಲಿ ಇದ್ದ , 1 ನೇ ಆರೋಪಿ ಮೃತ ರವಿಯನ್ನು ಕೊಲೆ ಮಾಡುತ್ತಿರುವ ಪೋಟೋಗಳನ್ನು ವರ್ಗಾಯಿಸಿಕೊಂಡು, ನಂತರ ಸದರಿ ಚಾಸಾ.14 ರವರ ಮೊಬೈಲ್ ನ್ನು, ಚಾಸಾ.20 ಮತ್ತು 21 ರವರ ಸಮಕ್ಷಮ ಠಾಣೆಯಲ್ಲಿ ಮಧ್ಯಾಹ್ನ 02.30-03.30 ರವರೆಗೆ ಮಹಜರ್ ಜರುಗಿಸಿ, ಸದರಿ ಮೊಬೈಲ್ ನ್ನು ಬಿಳಿ ಬಟ್ಟೆಯಲ್ಲಿ ಹಾಕಿ, ಭದ್ರ ಪಡಿಸಿ 'ಎಂ' ಎಂಬ ಸೀಲ್ ನ್ನು ಹಾಕಿ, ಅಮಾನತ್ತುಪಡಿಸಿಕೊಂಡಿರುತ್ತೇನೆ. ಚಾಸಾ.14 ರವರ ಮೊಬೈಲ್ ನ ವಾಟ್ಸ್ ಆಪ್ ನಲ್ಲಿ ಪೋಟೋಗಳ ಜೊತೆಗೆ 3 ಮೆಸೇಜ್ ಗಳು ಇದ್ದು , ಮೊದಲನೆಯದು , **'mugethu kathi'** ಎರಡನೆಯದು '**avndndu'** ಮೂರನೆಯದು '**don't worry jayasuriya'** ಎಂದು ಇರುತ್ತದೆ. ಸದರಿ ಮೊಬೈಲ್ ನ್ನು ಅಮಾನತ್ತುಪಡಿಸಿಕೊಂಡ ನಂತರ ಠಾಣಾ ಮಾಲು ಪಟ್ಟಿ ಸಂಖ್ಯೆ 167/20 ರಲ್ಲಿ ಅಳವಡಿಸಿ ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಸಾಕ್ಷಿಯೂ ಮಹಜರ್ ನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ. 22 ಎಂದು, ಸಾಕ್ಷಿಯ ಸಹಿಯನ್ನು ನಿಪಿ.22(ಸಿ) ಎಂದು ಗುರುತಿಸಲಾಯಿತು. ಸಾಕ್ಷಿಯೂ ಚಾಸಾ.14 ರವರ ಮೊಬೈಲ್ ನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ಎಂಒ-11 ಎಂದು ಗುರುತಿಸಲಾಗಿರುತ್ತದೆ.

16. ದಿ.28.12.2020 ರಂದು ಚಾಸಾ.37 ರವರ ಮುಖಾಂತರ ಠಾಣಾ ಮಾಲು ಪಟ್ಟಿ ಸಂಖ್ಯೆ 166/20 ಮತ್ತು 159/20 ರಲ್ಲಿ ಐಟಂ ನಂಬರ್ 6 ಮತ್ತು 10 ಗಳನ್ನು ರಾಸಾಯನಿಕ ಪರೀಕ್ಷೆಗಾಗಿ ಮೈಸೂರಿನ ಆರ್ ಎಫ್ ಎಸ್ ಎಲ್‌ಗೆ ಕಳುಹಿಸಿಕೊಟ್ಟಿರುತ್ತೇವೆ. ಅದರಂತೆ ಚಾಸಾ.34 ರವರು ದಿ.04.02.2021 ರಂದು ಎಫ್ ಎಸ್ ಎಲ್ ವರದಿಯನ್ನು

ನೀಡಿರುತ್ತಾರೆ. ಅದೇ ರೀತಿ ಚಾಸಾ.35 ರವರು ದಿ.26.02.2021 ರಂದು ಮಾಲು ಪಟ್ಟಿ ಸಂಖ್ಯೆ 159/20 ರ ಕ್ರಮ ಸಂಖ್ಯೆ 10 ಕ್ಕೆ ಸಂಬಂಧಪಟ್ಟಂತೆ ಎಫ್ ಎಸ್ ಎಲ್ ವರದಿಯನ್ನು ನೀಡಿರುತ್ತಾರೆ. ಸಾಕ್ಷಿಯೂ ಎಫ್ ಎಸ್ ಎಲ್ ವರದಿಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಈಗಾಗಲೇ ನಿಪಿ.48 ಮತ್ತು 55 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿಪಿ.48(ಬಿ) ಎಂದು ಮತ್ತು ನಿಪಿ.55(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಯೂ ಸ್ಯಾಂಪಲ್ ಸೀಲ್ ನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ.56 ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಊಟದ ಸಮಯವಾದ್ದರಿಂದ ಮುಂದುವರೆದ ಮುಖ್ಯ ವಿಚಾರಣೆಯನ್ನು ಮಧ್ಯಾಹ್ನಕ್ಕೆ ಮುಂದೂಡಲಾಯಿತು. )**

**ಸಾಕ್ಷಿಯನ್ನು ಮಧ್ಯಾಹ್ನದ ನಂತರ ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವೆರದ ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದಃ**

17. 1 ನೇ ಆರೋಪಿಯ ಹೆಸರು ಸೆಲ್ವಿ ಸ್ಟಾರ್ ಎಂದು ಹೇಳುತ್ತಿದ್ದು, ಆತನ ಹೆಸರು ವಿನಯ್ ಅಲಿಯಾಸ್ ಪರೋಟ ಎಂತಲೂ ಸಹ ಕರೆಯುತ್ತಿದ್ದು, ಆ ವಿಚಾರಕ್ಕೆ ಸಂಬಂಧಪಟ್ಟಂತೆ ಆತನ ಹೆಸರನ್ನು ಖಚಿತಪಡಿಸಿಕೊಳ್ಳಲು ದಿ.29.12.2020 ರಂದು 1 ನೇ ಆರೋಪಿ ವಿದ್ಯಾಭ್ಯಾಸ ಮಾಡಿದ ಛಾಯಾದೇವಿ ಪ್ರೌಢ ಶಾಲೆಗೆ 1 ನೇ ಆರೋಪಿಗೆ ಸಂಬಂಧಪಟ್ಟ, ಜನ್ಮ ದಿನಾಂಕ, ಹೆಸರು ಮತ್ತು ಜಾತಿ ಪ್ರಮಾಣ ಪತ್ರವನ್ನು ನೀಡುವಂತೆ ಮನವಿಯನ್ನು ಸಲ್ಲಿಸಿರುತ್ತೇನೆ. ಚಾಸಾ.26 ರವರು ದಿ.30.12.2020 ರಂದು ವರದಿಯನ್ನು ನೀಡಿರುತ್ತಾರೆ. ಸಾಕ್ಷಿಯೂ ಮನವಿ ಪತ್ರವನ್ನು ನೋಡಿ ಗುರುತಿಸಿದ್ದು,

ಅದನ್ನು ನಿಪಿ.73 ಎಂದು, ಸಾಕ್ಷಿಯ ಸಹಿಯನ್ನು ನಿಪಿ.73(ಎ) ಎಂದು ಗುರುತಿಸಲಾಯಿತು.

18. ಸಾಕ್ಷಿಯೂ ಮುಖ್ಯೋಪಾಧ್ಯಾಯರು, ಛಾಯಾದೇವಿ ಹೈ ಸ್ಕೂಲ್ ರವರು ದಿ.30.12.2020 ರ ಪತ್ರವನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ.74 ಎಂದು , ಸಾಕ್ಷಿಯ ಸಹಿಯನ್ನು ನಿಪಿ. 74(ಎ) ಎಂದು ಗುರುತಿಸಲಾಯಿತು. ಅದರಲ್ಲಿ ಶಾಲಾ ದಾಖಲಾತಿಗಳ ಎರಡು ಹಾಳೆಗಳು ಇರುತ್ತವೆ.

19. ದಿ.02.01.2021 ರಂದು ಅಶೋಕಪುರಂ ಪೊಲೀಸ್ ಠಾಣೆಯಲ್ಲಿರುವ **CEN** ವಿಭಾಗಕ್ಕೆ ಭೇಟಿ ನೀಡಿ, ಚಾಸಾ.14 ರವರಿಂದ ಅಮಾನತ್ತುಪಡಿಸಿಕೊಂಡಂತಹ ಮಾಲು ಪಟ್ಟಿ ಸಂಖ್ಯೆ 167/2020 ರಲ್ಲಿ ವಿವೋ 1603 ಮೊಬೈಲ್ ಪೋನ್ ನ್ನು **Data Extract** ಮಾಡಿಸುವ ಸಂಬಂಧ , ಚಾಸಾ.20, 21 ರವರ ಸಮಕ್ಷಮ **Data Extract** ಮಹಜರ್ ನ್ನು ಜರುಗಿಸಿರುತ್ತೇನೆ. ಆ ಸಮಯದಲ್ಲಿ ಈ ಮೊದಲು ಸೀಲ್ ಮಾಡಿದ ಮೊಬೈಲ್ ಕವರ್ ನ ಸೀಲ್ ನ್ನು ಪಂಚರ ಸಮಕ್ಷಮ ತೆಗೆದು, ಚಾಸಾ.36 ರವರು ನಮ್ಮ ಠಾಣೆಯಲ್ಲಿ ಇರುವ ಆಂಟಿ ಅನಲೈಸರ್ ಸಿಸ್ಟಮ್ ಗೆ, ಮೊಬೈಲ್ ನ್ನು ಅಳವಡಿಸಿ, ಯೂಫೆಡ್ ಸಾಫ್ಟವೇರ್ ಉಪಯೋಗಿಸಿ, ವಿವೋ ಕಂಪನಿಯ ಮೊಬೈಲ್ ಫೋನ್ ನಲ್ಲಿ ಇರುವ ವಾಟ್ಸ್ ಆಪ್ ನಲ್ಲಿ ಸಿಮ್ ನಂಬರ್ 8660343740 1 ನೇ ಆರೋಪಿಗೆ ಸಂಬಂಧಿಸಿದ್ದು, ಅದನ್ನು ವಿನು ಅಣ್ಣ ಎಂದು ನಮೂದಿಸಿದ್ದನ್ನು ನೋಡಿ, ಅದರಲ್ಲಿ ದಿ.15.12.2020 ರ ಮೂರು ಪೋಟೋಗಳು ಮತ್ತು ಮೂರು ಸಂದೇಶಗಳು ಇದ್ದವು. ಸದರಿ ಡೇಟಾ ವನ್ನು **extract** ಮಾಡಿ, ವರದಿಯನ್ನು ನೀಡಿರುತ್ತಾರೆ.

20. ನಂತರ ಸದರಿ ಮೊಬೈಲ್ ನ್ನು ಎಫ್ ಎಸ್ ಎಲ್ ಕಳುಹಿಸುವ ಸಂಬಂಧ **Q1** ಎಂದು ಹೆಸರು ನೀಡಿ, ಬಿಳಿ ಚೀಲದಲ್ಲಿ ಹಾಕಿ, ಹೊಲೆದು **M** ಅಕ್ಷರದಿಂದ ಮಾಡಲಾಯಿತು. ಸದರಿ ಮಹಜರ್ ನ್ನು ಸಂಜೆ 06.30–07.50 ರವೆರೆಗೆ ಮಹಜರ್ ನ್ನು ಜರುಗಿಸಿ, **CEN** ಪೊಲೀಸ್ ಠಾಣೆಯ ಚಾಸಾ.36 ರವರಿಗೆ ಮೊಬೈಲ್ ನ್ನು ಹಸ್ತಾಂತರಿಸಿರುತ್ತೇನೆ. ಸದರಿ ಮಹಜರ್ ಗೆ ಚಾಸಾ.20, 21 , 36 , 44 ರವರುಗಳು ಸಹಿ ಮಾಡಿರುತ್ತಾರೆ. ಮಹಜರ್ ಕಾಲದಲ್ಲಿ ಪೋಟೋಗಳನ್ನು ತೆಗೆದಿಸಿರುತ್ತೇನೆ. ಸಾಕ್ಷಿಯೂ ಪೋಟೋಗಳನ್ನು ನೋಡಿ ಗುರುತಿಸಿದ್ದು , ಅವುಗಳನ್ನು ಈಗಾಗಲೇ ನಿಪಿ. 31 ಮತ್ತು 31 ಎಂದು ಗುರುತಿಸಲಾಗಿರುತ್ತದೆ. ಸಾಕ್ಷಿಯೂ **CEN** ಪೊಲೀಸ್ ಠಾಣೆಯಲ್ಲಿ ಪಡೆದ ವರದಿಯನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ.58 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ.58(ಎ) ಎಂದು ಗುರುತಿಸಲಾಯಿತು.

21. ದಿ.05.01.2021 ರಂದು ಮಾಲು ಪಟ್ಟಿ ಸಂಖ್ಯೆ 167/2020 ರಲ್ಲಿ ಅಮಾನತ್ತುಪಡಿಸಿಕೊಂಡ ವಿವ್ರೋ ಮೊಬೈಲ್ ನ್ನು ತಜ್ಞರ ವರದಿಗಾಗಿ ಎಫ್ ಎಸ್ ಎಲ್, ಬೆಂಗಳೂರುರವರಿಗೆ ಚಾಸಾ.38 ರವರ ಮುಖಾಂತರ ಕಳುಹಿಸಿ ಸ್ವೀಕೃತಿಯನ್ನು ಪಡೆದಿರುತ್ತೇನೆ. ಸಾಕ್ಷಿಯೂ ಸ್ವೀಕೃತಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ.75 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿಪಿ.75(ಎ) ಎಂದು ಗುರುತಿಸಲಾಯಿತು.

22. ದಿ.07.01.2021 ರಂದು ಸಹಾಯಕ ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಮೈಸೂರು ರವರಿಗೆ, ಕೃತ್ಯ ನಡೆದ ಸ್ಥಳದ ನಕಾಶೆಯನ್ನು

ತಯಾರಿಸಿ ಕೊಡುವಂತೆ ಮನವಿಯನ್ನು ಸಲ್ಲಿಸಿದ್ದು, ಚಾಸಾ.29 ರವರು ದಿ.03.02.2021 ರಂದು ವರದಿ ತಯಾರಿಸಿದ್ದು, ದಿ.05.02.2021 ರಂದು ಸ್ವೀಕರಿಸಿರುತ್ತೇನೆ. ಸಾಕ್ಷಿಯೂ ಕೋರಿಕೆ ಪತ್ರವನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ.76 ಎಂದು, ಸಾಕ್ಷಿಯ ಸಹಿಯನ್ನು ನಿಪಿ.76(ಎ) ಎಂದು ಗುರುತಿಸಲಾಯಿತು. ಸಾಕ್ಷಿಯೂ ಕಾರ್ಯಪಾಲಕ ಅಭಿಯಂತರರು ನೀಡಿದ ಪತ್ರವನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ. 77 ಎಂದು, ಸಾಕ್ಷಿಯ ಸಹಿಯನ್ನು ನಿಪಿ.77(ಎ) ಎಂದು ಗುರುತಿಸಲಾಯಿತು. ಸಾಕ್ಷಿಯೂ ನಕಾಶೆಯನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ. 57 ಎಂದು, ಸಾಕ್ಷಿಯ ಸಹಿಯನ್ನು ನಿಪಿ.57(ಬಿ) ಎಂದು ಗುರುತಿಸಲಾಯಿತು.

23. ದಿ.10.02.2021 ರಂದು ಎ ಎಸ್ ಐ ಪಾಪಣ್ಣ ಚಾಸಾ.47 , ಹೆಚ್ ಸಿ –60 ಮಂಜುನಾಥ ಚಾಸಾ.42, ಪಿಸಿ–708 ಮಹೇಶ ಚಾಸಾ.40, ಮೂವರನ್ನು ದಿ.09.02.2021 ರಂದು 1 ನೇ ಆರೋಪಿ ಕೇರಳದ ಕೊಲಂ ನಲ್ಲಿ ಇರುವ ಬಗ್ಗೆ ಖಚಿತ ಮಾಹಿತಿ ಬಂದಿದ್ದು, ಆತನನ್ನು ವಶಕ್ಕೆ ಪಡೆದುಕೊಂಡು ನನ್ನ ಸಮಕ್ಷಮ ಹಾಜರುಪಡಿಸುವಂತೆ ಸೂಚಿಸಿ, ನೇಮಿಸಿ ಕಳುಹಿಸಿರುತ್ತೇನೆ. ಅದರಂತೆ ಮೇಲೆ ಹೇಳಿದವರು, ದಿ.09.02.2021 ರಾತ್ರಿ 08.00 ಗಂಟೆ ಸುಮಾರಿಗೆ ಕೇರಳ ರಾಜ್ಯ ಕೊಲಂ ಜಿಲ್ಲೆ , ಕೊಟ್ಟಿಯಾನ್ ಆರ್ಯಸ್ ಹೋಟೆಲ್ ಮುಂಭಾಗ ಸಾರ್ವಜನಿಕ ರಸ್ತೆಯಲ್ಲಿ 1 ನೇ ಆರೋಪಿಯಾದ ಸೆಲ್ವಿ ಸ್ಟಾರ್ ಅಲಿಯಾಸ್ ವಿನಯ್ ಪರೋಟನನ್ನು ಸ್ಥಳೀಯ ಪೊಲೀಸರ ಸಹಾಯದಿಂದ ವಶಕ್ಕೆ ಪಡೆದು, ದಿ.10.02.2021 ರಂದು ಬೆಳಿಗ್ಗೆ 08.40 ರ ಸುಮಾರಿಗೆ ಚಾಸಾ.47 ರವರು ಆತನನ್ನು ನನ್ನ ಸಮಕ್ಷಮ ವರದಿಯೊಂದಿಗೆ

ಹಾಜರುಪಡಿಸಿರುತ್ತಾರೆ. ಸಾಕ್ಷಿಯೂ ಚಾಸಾ.47 ರವರು ನೀಡಿದ ವರದಿಯನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ. 60 ಎಂದು, ಸಾಕ್ಷಿಯ ಸಹಿಯನ್ನು ನಿಪಿ.60(ಬಿ) ಎಂದು ಗುರುತಿಸಲಾಯಿತು. ಸದರಿ 1 ನೇ ಆರೋಪಿಯನ್ನು ವಿಚಾರಣೆ ಮಾಡಿದ್ದು , ಆತ ತನ್ನ ತಪ್ಪನ್ನು ಒಪ್ಪಿಕೊಂಡು ಸ್ವ ಇಚ್ಚಾ ಹೇಳಿಕೆಯನ್ನು ನೀಡಿರುತ್ತಾನೆ. ತನ್ನ ಸ್ವ ಇಚ್ಚಾ ಹೇಳಿಕೆಯಲ್ಲಿ ಮೃತ ರವಿ ಮತ್ತು 1 ನೇ ಆರೋಪಿಯ ಸ್ನೇಹಿತನಾಗಿದ್ದು, ಮೃತನಿಂದ 1 ನೇ ಆರೋಪಿಯ 15,000/– ರೂ. ಹಣವನ್ನು ಪಡೆದುಕೊಂಡಿದ್ದು , ದಿ. 12.12.2020 ರಂದು ರಾತ್ರಿ 09.30 ಗಂಟೆ ಸುಮಾರಿಗೆ , ಮೃತನು 1 ನೇ ಆರೋಪಿ ವಾಸ ಮಾಡುವ ಮನೆಯ ಮಧ್ಯಪಾನ ಮಾಡಿಕೊಂಡು ಬಂದು , ತನ್ನ ಹಣ ನೀಡುವಂತೆ ಗಲಾಟೆ ಮಾಡಿದ್ದು , ಇದರಿಂದ ಮನೆಯ ಮಾಲೀಕರು , 1 ನೇ ಆರೋಪಿಗೆ ಮನೆಯ ಹತ್ತಿರ ಬಂದು ಮಾರ್ಯಾದೆ ಹೋಯಿತು ಎಂದು , 1 ನೇ ಆರೋಪಿಗೆ ಮನೆ ಖಾಲಿ ಮಾಡುವಂತೆ ಸೂಚಿಸಿರುತ್ತಾರೆ.

24. ದಿ.14.12.2020 ರಂದು ರಾತ್ರಿ 10.30 ಗಂಟೆ ಸುಮಾರಿಗೆ ಕುರಿಮಂಡಿ ಕಸಾಯಿಖಾನೆ ಗೇಟ್ ಬಳಿ 1 ರಿಂದ 3 ನೇ ಆರೋಪಿ ಮತ್ತು ಮೃತನು ಇದ್ದಾಗ , 1 ನೇ ಆರೋಪಿಯ ಸ್ನೇಹಿತನಾಗಿದ್ದ ಚಾಸಾ.14 ರವರಿಗೆ ಮೃತನು ಹೊಡೆದಿದ್ದು , ಹಾಗೂ 1 ನೇ ಆರೋಪಿಯೊಂದಿಗೆ ಜಗಳ ಮಾಡಿದ್ದು, ಈ ವಿಚಾರವಾಗಿ ಮೃತನನ್ನು ಕೊಲೆ ಮಾಡುವ ಉದ್ದೇಶದಿಂದ , ಸದರಿ ಸ್ಥಳದಲ್ಲಿ ಸಂಚು ರೂಪಿಸಿ , ನಂತರ ಅದೇ ರಾತ್ರಿ 11.30 ಗಂಟೆ ಸುಮಾರಿಗೆ ಮೃತನ ಮನೆಗೆ ಬಂದು 1 ರಿಂದ 3 ನೇ ಆರೋತಪಿರು ಭೇಟಿ ನೀಡಿ , ಡ್ರಿಂಕ್ಸ್ ಪಾರ್ಟಿ ಮಾಡುವ ನೆಪದಲ್ಲಿ ಮೃತನಿಗೆ ಕುಡಿಸಿ , ತಾವು ಕುಡಿದು, 1 ನೇ ಆರೋಪಿಯು , ಮೃತ ರವಿಯನ್ನು , ತನ್ನ ಪ್ಯಾಂಟ್ ಗೆ ಧರಿಸಿದ ಬೆಲ್ಟ್ ನಿಂದ ಮೃತನ ಎದೆಯ ಮೇಲೆ

ಕುಳಿತು , ಬೆಲ್ಟ್ ನಿಂದ ಕುತ್ತಿಗೆಯನ್ನು ಬಿಗಿದು , ಹಾಗೂ ಅಲ್ಲೇ ಇದ್ದ ಟವಲ್ ನಿಂದ 2 ನೇ ಆರೋಪಿತರ ಸಹಾಯದೊಂದಿಗೆ ಮೃತನ ಕುತ್ತಿಗೆಯನ್ನು ಬಿಗಿದು , ಉಸಿರುಗಟ್ಟಿಸಿ ಸಾಯಿಸಿರುವುದಾಗಿ , ಹಾಗೂ 3 ನೇ ಆರೋಪಿ ಕಾಲನ್ನು ಹಿಡಿದುಕೊಂಡು ಸತ್ತ ನಂತರ ಬದುಕಿದ್ದಾನೆ ಇಲ್ಲವೇ ಎಂಬುದನು ಖಚಿತಪಡಿಸಿಕೊಳ್ಳಲು , ಮೃತನ ಎಡ ತೊಡೆಗೆ ಕತ್ತರಿಸಿದ ಗಾಯ ಮಾಡಿ , ಅತನು ಅಲುಗಾಡದೆ ಇದ್ದಾಗ , ಆತ ತೀರಿಕೊಂಡಿರುತ್ತಾನೆ ಎಂದು ಖಚಿತಪಡಿಸಿಕೊಂಡು , ನಂತರ 1 ನೇ ಆರೋಪಿ ಆತನನ್ನು ಕೊಲೆ ಮಾಡುವ ಕಾಲಕ್ಕೆ ತನ್ನ ಮೊಬೈಲ್ ನಿಂದ 3 ನೇ ಆರೋಪಿಗೆ ಪೋಟೋವನ್ನು ತೆಗೆಯಲು ಹೇಳಿ 3 ಪೋಟೋಗಳನ್ನು ತೆಗಸಿ , ಚಾಸಾ.14 ರವರಿಗೆ 3 ಪೋಟೊ ಮತ್ತು 3 ಸಂದೇಶಗಳನ್ನು ಕಳುಹಿಸಿರುತ್ತಾನೆ. ಕೃತ್ಯ ನಡೆಸಲು ಉಪಯೋಗಿಸಿದ ಬೆಲ್ಟ , ಟವಲ್ ಮತ್ತು ಚಾಕುವನ್ನು ತೆಗೆದುಕೊಂಡು 3 ನೇ ಆರೋಪಿತ ಬೈಕ್ ನ ಸಹಾಯದಿಂದ , ತನ್ನ ಮನೆಗೆ ಹೋಗಿ , ಚಾಕುವನ್ನು ತೊಳೆದು , ತನ್ನ ರೂಮಿನ ಸರ್ಜಾ ದ ಮೇಲೆ ಇಟ್ಟು, ನಂತರ 1 ರಿಂದ 3 ಜನ ಆರೋಪಿತರು ಸಬರ್ ಬಸ್ ಸ್ಟಾಂಡ್ ಬಳಿ ಹೋಗಿ , ಟೀ , ಸಿಗರೇಟ್ ಸೇದಿ , ಅಂಗಡಿಯವನಿಗೆ ಪೇಟಿಎಂ ಮುಖಾಂತರ ಹಣವನ್ನು ನೀಡಿ, ನಂತರ ಕೆ ಆರ್ ಆಸ್ಪತ್ರೆಯ ಕಣ್ಣು ಆಸ್ಪತ್ರೆಯ ಬಳಿ ಹೋಗಿ ಚಾಸಾ.14 ರರಿಗೆ ತಾವು ಕೊಲೆ ಮಾಡಿರುವ ವಿಚಾರ ತಿಳಿಸಿ, ನಂತರ ಕೇರಳಾಗೆ ಹೋಗಿ ತಲೆಮರೆಸಿಕೊಂಡಿರುವುದಾಗಿ ತನ್ನ ಸ್ವ ಇಚ್ಛಾ ಹೇಳಿಕೆಯಲ್ಲಿ ಹೇಳಿರುತ್ತಾನೆ ಅದೇ ರೀತಿ ಕೊಲೆ ಬಳಸಿದ ಬೆಲ್ಟ್ , ಟವಲ್ ಮತ್ತು ಚಾಕುವನ್ನು ಕುರಿಮಂಡಿಯ ತನ್ನ ಮನೆಯಲ್ಲಿ ಇಟ್ಟಿರುವುದಾಗಿ ತಿಳಿಸಿರುತ್ತಾನೆ. ಸದರಿ ವಸ್ತುಗಳನ್ನು ಹಾಜರುಪಡಿಸುತ್ತೇನೆ ಎಂದು ಹೇಳಿರುತ್ತಾನೆ. ಹೇಳಿಕೆಯ ಭಾಗವನ್ನು

ನಿಪಿ.78 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿಪಿ.78(ಎ) ಎಂದು ಗುರುತಿಸಲಾಯಿತು.

25. ನಂತರ ಚಾಸಾ.47 ರವರು ಆರೋಪಿಗೆ ಸಂಬಂಧಿಸಿದ ಮೊಬೈಲ್ ನ್ನು ಹಾಜರುಪಡಿಸಿದ್ದು, ಆರೋಪಿ ಬಳಿ ಇದ್ದ ಮೊಬೈಲ್ **samsung A galaxy mobile** ನ್ನು ಠಾಣೆಗೆ ಹಾಜರುಪಡಿಸಿದ್ದು, ಚಾಸಾ.22 ಮತ್ತು 23 ರವರ ಸಮಕ್ಷಮ ಬೆಳಿಗ್ಗೆ 11.00–11.30 ಗಂಟೆಗೆ ಎಫ್ ಎಸ್ ಎಲ್ ತಜ್ಞರಿಗೆ ಕಳುಹಿಸಿ, ಆ ಸಂಬಂಧ ಅಮಾನತ್ತುಪಡಿಸಿಕೊಂಡಿರುತ್ತೇನೆ. ಸದರಿ ಮಹಜರ್ ಕಾಲದಲ್ಲಿ ಮೊಬೈಲ್ ನ್ನು ಪರಿಶೀಲಿಸಿದಾಗ ದಿ.15.12.2020 ರಂದು ಬೆಳಿಗಗಿನ ಜಾವ 1 ನೇ ಆರೋಪಿಯ ಮೃತನನ್ನು ಕೊಲೆ ಮಾಡುವ ಕಾಲಕೆಕ ತೆಗೆಸಿದ ಪೋಟೋಗಳನ್ನು ಡಿಲಿಟ್ ಮಾಡಿದ್ದು , ಹಾಗೂ ಚಾಸಾ.14 ರವರಿಗೆ ವಾಟ್ಸ್ ಆಪ್ ಮುಖಾಂತರ ಕಳುಹಿಸಿದ ಸಂದೇಶಗಳನ್ನು ಡಿಲಿಟ್ ಮಾಡಿ , ವಾಟ್ಸ್ ಅಪ್ **uninstall** ಮಾಡಿರುವುದು ಕಂಡು ಬಂದಿರುತ್ತದ. ಸದರಿ ಮೊಬೈಲ್ ನ್ನು ಬಿಳಿ ಬಟ್ಟೆಯಲಿ ಹಾಕಿ ಹೊಲಿದು , **M** ಎಂಬ ಅಕ್ಷರದಿಂದ ಸೀಲು ಮಾಡಿ ಮುಂದಿನ ಕ್ರಮಕ್ಕಾಗಿ ಅಮಾನತ್ತುಪಡಿಸಿಕೊಂಡಿರುತ್ತೇನೆ. ಸದರಿ ಮೊಬೈಲ್ ನ್ನು ಠಾಣಾ ಮಾಲು ಪಟ್ಟಿ ಸಂಖ್ಯೆ 19/21 ರಲ್ಲಿ ಅಳವಡಿಸಿ ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. 1 ನೇ ಆರೋಪಿಯ ತನ್ನ ಹೇಳಿಕೆಯಲ್ಲಿ ಮೊಬೈಲ್ ನಲ್ಲಿ ಇದ್ದ ಸಿಮ್ ನ್ನು ಬಿಸಾಕಿರುವುದಾಗಿ ತಿಳಿಸಿರುತ್ತಾನೆ. ಸಾಕ್ಷಿಯೂ ಅಮಾನತ್ತು ಮಹಜರ್ ನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ.35 ಎಂದು, ಸಾಕ್ಷಿಯ ಸಹಿಯನ್ನು ನಿಪಿ.35(ಬಿ) ಎಂದು ಗುರುತಿಸಲಾಯಿತು. ಸದರಿ ಮೊಬೈಲ್ ನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿಯೂ ಎಂಒ–12 ಮೊಬೈಲ್ ನ್ನು ನೋಡಿ ಗುರುತಿಸಿರುತ್ತಾರೆ.

26. ನಂತರ ಚಾಸಾ.24 ಮತ್ತು 25 ರವರನ್ನು ಠಾಣೆಗೆ ಕರೆಸಿ , ಪೊಲೀಸ್ ವಶದಲ್ಲಿದ್ದ 1 ನೇ ಆರೋಪಿಯ ಸ್ವ ಇಚ್ಛಾ ಹೇಳಿಕೆಯ ಸಾರಾಂಶವನ್ನು ತಿಳಿಸಿ , 1 ನೇ ಆರೋಪಿಯು ಕೃತ್ಯಕ್ಕೆ ಉಪಯೋಗಿಸಿದ ವಸ್ತುಗಳನ್ನು ಹಾಜರುಪಡಿಸುವ ಕಾಲಕ್ಕೆ ಪಂಚರಾಗಿ ಹಾಜರು ಇರುವ ಬಗ್ಗೆ ಕೋರಿಕೊಂಡಿದ್ದು , ಅದಕ್ಕೆ ಒಪ್ಪಿ , ನೋಟೀಸ್ ಜಾರಿ ಮಾಡಿ , ನಂತರ ಠಾಣೆಯಿಂದ ಇಲಾಖಾ ವಾಹನದಲ್ಲಿ ಹೊರಟು , ಕುರಿಮಂಡಿ, 2 ನೇ ಕ್ರಾಸ್ , ಮನೆ ನಂ.155 ರ ಒಂದೇ ಮಹಡಿಯ ಮೇಲೆ ಇರುವ 1 ಆರೋಪಿಯ ಮನೆಗೆ ಆತನ ಮನೆಗೆ ಕರೆದುಕೊಂಡು ಹೋಗಿ , ಬೆಡ್ ರೂಮಿ ನ ಸರ್ಜಾ ಮೇಲೆ ಇದ್ದ ಒಂದು ಕೇಸರಿ ಮತ್ತು ಬಿಳಿ ಬಣ್ಣದ ಕಾಟನ್ ಟವಲ್ , ಅಲ್ಲಲ್ಲಿ ಹರಿದಿರುತ್ತದೆ , ಅಂದಾಜು ಏಳುವರೆ ಇಂಚಿನ ಸ್ಟೀಲ್ ಚಾಕು , ಅದರಲ್ಲಿ 3 ಇಂಚು ಉದ್ದದ ಕೇಸರಿ ಹಿಡಿ ಇದ್ದು , 3/4 ಇಂಚು ಅಗಲವಾಗಿದ್ದು , ಒಂದು ಕಡೆ ಹರಿತವಾಗಿದ್ದು , ಹಿಡಿ ಚೂಪಾಗಿರುತ್ತದೆ. ಇನ್ನೊಂದು 43 ಇಂಚು ಉದ್ದದ ಒಂದು ಕಾಲು ಇಂಚು ಅಗಲದ ಒಂದು ಬೆಲ್ಟ್ ನ್ನು , ಒಂದು ಕಡೆ ಕಪ್ಪು ಮತ್ತು ಮತ್ತೊಂದು ಕಡೆ ಬಿಸ್ಕೆಟ್ ಬಣ್ಣವಾಗಿದ್ದು , ಬೆಲ್ಟ್ ನಲ್ಲಿ ಬಕಲ್ ಇರುತ್ತದೆ. ಸದರಿ ವಸ್ತುಗಳನ್ನು ಮದ್ಯಾಹ್ಞ 12.30-02.00 ಗಂಟೆವರೆಗೆ ಅಮಾನತ್ತು ಮಹಜರ್ ಜರುಗಿಸಿ, ಅಮಾನತ್ತು ಪಡಿಸಿಕೊಂಡಿರುತ್ತೇನೆ. ಸದರಿ ವಸ್ತುಗಳನ್ನು ಬಿಳಿ ಬಟ್ಟೆಯಲ್ಲಿ ಹಾಕಿ, **M** ಎಂಬ ಅಕ್ಷರದಿಂದ ಸೀಲ್ ಮಾಡಿರುತ್ತೇನೆ. ಸದರಿ ಅಮಾನತ್ತು ಕಾಲಕ್ಕೆ ಎರಡು ಪೋಟೋಗಳನ್ನು ತೆಗೆದಿರುತ್ತೇನೆ. ಸಾಕ್ಷಿಯೂ ಮಹಜರ್ ನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ.39 ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ.39(ಎ) ಎಂದು ಗುರುತಿಸಲಾಯಿತು. ಸಾಕ್ಷಿಯೂ ಎರಡು ಪೋಟೋಗಳನ್ನು ನೋಡಿ ಗುರುತಿಸಿದ್ದು,

ಅವುಗಳನ್ನು ಈಗಾಗಲೇ ನಿಪಿ. 40 ರಿಂದ 43 ಎಂದು ಗುರುತಿಸಲಾಗಿರುತ್ತದೆ. ಸಾಕ್ಷಿಯೂ ಎಂಒ-13 ರಿಂದ 15 ನ್ನು ನೋಡಿ ಗುರುತಿಸಿರುತ್ತಾರೆ.

27. ನಂತರ ಸದರಿ ಅಮಾನತ್ತುಪಡಿಸಿಕೊಂಡ ಮುದ್ದೆ ಮಾಲುಗಳನ್ನು ಠಾಣಾ ಮಾಲು ಪಟ್ಟಿ ಸಂಖ್ಯೆ 21/2021 ರಲ್ಲಿ ಅಳವಡಿಸಿ ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ನಂತರ 1 ನೇ ಆರೋಪಿಯ ವಿರುದ್ಧ ದಸ್ತಗಿರಿ ಕ್ರಮ ಜರುಗಿಸಿ, ಆತನನ್ನು ಮಾನ್ಯ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ.

28. ಅದೇ ದಿನ ಚಾಸಾ.15, 16, 24 ಮತ್ತು 25 ರವರುಗಳ ಹೇಳಿಕೆಗಳನ್ನು ದಾಖಲಿಸಿಕೊಂಡಿರುತ್ತೇನೆ. ಚಾಸಾ-15 ರವರು ತಮ್ಮ ಹೇಳಿಕೆಯ ಕಾಲದಲ್ಲಿ ತಮ್ಮ ಮನೆಯಲ್ಲಿ 1 ನೇ ಆರೋಪಿ ಬಾಡಿಗೆಗೆ ವಾಸವಿದ ಬಗ್ಗೆ **xerox** ಕರಾರು ಪತ್ರವನ್ನು ಹಾಜರುಪಡಿಸಿರುತ್ತಾರೆ . ಅದನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ.

29. ನಂತರ ಕೃತ್ಯ ನಡೆಯುವ ಕಾಲಕ್ಕೆ ಬಳಸಿದ ದ್ವಿಚಕ್ರ ವಾಹನಕ್ಕೆ ಸಂಬಂಧಪಟ್ಟ **B extract** ನೀಡುವಂತೆ , **RTO East** ರವರಿಗೆ ಮನವಿಯನ್ನು ಸಲ್ಲಿಸಿದ್ದು, ಅವರು **B extract** ವರದಿಯನ್ನು ನೀಡಿದ್ದು, ಸದರಿ ವರದಿಯ ಪ್ರಕಾರ, ಸದರಿ ವಾಹನ ಚಾಸಾ.16 ರವರ ಹೆಸರಿನಲ್ಲಿ ಇರುವುದಾಗಿ ಕಂಡುಬಂದಿರುತ್ತದೆ. ಸದರಿ **B extract** ನ್ನು ನೀಡುವಂತೆ ಚಾಸಾ.44 ರವರು ಕೋರಿಕೆ ಪತ್ರವನ್ನು ಸಲ್ಲಿಸಿರುತ್ತಾರೆ. ಸಾಕ್ಷಿಯೂ ಕೋರಿಕೆ ಪತ್ರವನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ.79 ಎಂದು ಗುರುತಿಸಲಾಯಿತು. ಸಾಕ್ಷಿಯೂ ವಾಹನ ಸಂಖ್ಯೆ **KA** 55 **EA** 2839 ಗೆ ಸಂಬಂಧಪಟ್ಟ **B extract** ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ.24 ಎಂದು , ಸಾಕ್ಷಿಯ ಸಹಿಯನ್ನು ನಿಪಿ.24(ಎ) ಎಂದು ಗುರುತಿಸಲಾಯಿತು.

30. ದಿ.10.02.2021 ರಂದು 1 ನೇ ಆರೋಪಿ ಮೃತನ ಕೊಲೆ ಮಾಡುವ ಮುಂಚೆ ಮದ್ಯವನ್ನು ಖರೀದಿಸಲು , ಕರ್ನಾಟಕ ಬ್ಯಾಂಕ್ ನ ಅಕೌಂಟ್ ಗೆ ಸಂಬಂಪಟ್ಟಂತೆ **Google pay** ಮುಖಾಂತರ ಹಣ ವರ್ಗಾಯಿಸಿ , ಖರೀದಿಸಿದ ಬಗ್ಗೆ **statement** ನೀಡುವಂತೆ ಕೋರಿಕೊಂಡಿದ್ದು , ಅದೇ ದಿನ **statement** ನ್ನು ಪಡೆದುಕೊಂಡಿರುತ್ತೇನೆ. ಸಾಕ್ಷಿಯೂ ಕೋರಿಕೆ ಪತ್ರವನ್ನು ನೋಡಿ ಗುರುತಿಸಿದ್ದು , ಸದರಿ ದಾಖಲೆಯನ್ನು ನಿಪಿ. 80 ಎಂದು, ಸಾಕ್ಷಿಯ ಸಹಿಯನ್ನು ನಿಪಿ. 80(ಎ) ಎಂದು ಗುರುತಿಸಲಾಯಿತು. ಸಾಕ್ಷಿಯೂ **statement** ನ್ನು ನೋಡಿ ಗುರುತಿಸಿದ್ದು , ಅದನ್ನು ಈಗಾಗಲೇ ನಿಪಿ.45 ಎಂದು , ಸಾಕ್ಷಿಯ ಸಹಿಯನ್ನು ನಿಪಿ.45(ಬಿ) ಎಂದು ಗುರುತಿಸಲಾಯಿತು.

31. ದಿ.15.02.2021 ರಂದು ನಿಪಿ.48 ಮತ್ತು 55 ರಲ್ಲಿ ಪಡೆದುಕೊಂಡ ವರದಿಗಳನ್ನು, ಮೃತನ ಸಾವಿನ ಬಗ್ಗೆ ಅಂತಿಮ ಅಭಿಪ್ರಾಯವನ್ನು ನೀಡುವಂತೆ, ದಿ.04.02.2021 ರಂದು ವೈದ್ಯಾಧಿಕಾರಿಗಳು, ನ್ಯಾಯ ವೈದ್ಯ ಶಾಸ್ತ್ರ ವಿಭಾಗಕ್ಕೆ ಕೋರಿಕೊಂಡಿದ್ದು, ಅದಕ್ಕೆ ಸಂಬಂದಪಟ್ಟಂತೆ ದಿ.15.02.2021 ರಂದು ವೈದ್ಯಾಧಿಕಾರಿಯವರಿಂದ ಮೃತನ ಸಾವಿನ ಬಗ್ಗೆ ಅಂತಿಮ ಅಭಿಪ್ರಾಯವನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ವರದಿಯನ್ನು ಪಡೆದುಕೊಂಡಿರುತ್ತೇನೆ. ಸಾಕ್ಷಿಯೂ ಸದರಿ ವರದಿಯನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ.47 ಎಂದು , ಸಾಕ್ಷಿಯ ಸಹಿಯನ್ನು ನಿಪಿ. 47(ಬಿ) ಎಂದು ಗುರುತಿಸಲಾಯಿತು.

32. ದಿ.16.02.2021 ರಂದು 1 ನೇ ಆರೋಪಿಯಿಂದ ವಶಪಡಿಸಿಕೊಂಡ ಪಿಎಫ್ ನಂ. 19/2021 ರಲ್ಲಿಯ **samsung galaxy** ಮೊಬೈಲ್ ನ್ನು ಅಶೋಕಪುರಂ ಪೊಲೀಸ್ ಠಾಣೆಯಲ್ಲಿರುವ **CEN** ವಿಭಾಗದಲ್ಲಿ ಮೊಬೈಲ್ ನಲ್ಲಿದ್ದ ಡೆಟಾ ವನ್ನು **extract** ಮಾಡಿಸುವ ಸಂಬಂಧ ಚಾಸಾ.20 ಮತ್ತು 21 ರವರ ಸಮಕ್ಷಮ , ಮೊಬೈಲ್ ಡೆಟಾ **extract** ಜರುಗಿಸಿರುತ್ತೇನೆ. ಸದರಿ **extract** ಕಾಲದಲ್ಲಿ 1 ನೇ ಆರೋಪಿಯ ಮೊಬೈಲ್ ನ್ನು ಲೋನ್ ನಲ್ಲಿ ಖರಿದಿಸಿದ್ದು, ಅದರ **EMI 3,372/-** ರೂ. ಬಾಕಿ ಇದ್ದ ಕಾರಣ, ಅದರಲ್ಲಿಯ **development mode** ಆಗಿರುವುದಿಲ್ಲ. ಅದರಲ್ಲಿ **Development mode** ಒಪನ್ ಮಾಡಲು **duplicate sim card** ನ್ನು ಖರೀದಿಸಿ , ಸಾಲವನ್ನು ಮರು ಪಾವತಿಸಿದ ನಂತರ **development mode** ಒಪನ್ ಆಗುವಂತೆ ಮಾಡಿದಾಗ **data extract** ಮಾಡಲು ಅವಕಾಶ ಇದೆ ಎಂದು **cyber crime** ಪೊಲೀಸರು ತಿಳಿಸಿರುತ್ತಾರೆ. ಸದರಿ ವಿವರಗಳಿಗೆ ಸಂಬಂಧಪಟ್ಟಂತೆ ಸಂಜೆ 04.00-05.00 ಗಂಟೆಯವರೆಗ ಮಹಜರ್ ಜರುಗಿಸಿರುತ್ತೇನೆ. ಸದರಿ ಮೊಬೈಲ್ ನ್ನು ಬಿಳಿ ಬಟ್ಟೆಯಲ್ಲಿ ಹಾಕಿ **M** ಎಂಬ ಅಕ್ಷರದಿಂದ ಸೀಲ್ ಮಾಡಿರುತ್ತೇನೆ. ಸದರಿ ಕಾಲದಲ್ಲಿ ಪೋಟೋಗಳನ್ನು ತೆಗೆಸಿರುತ್ತೇನೆ. ಸಾಕ್ಷಿಯೂ ಮಹಜರ್ ನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ.81 ಎಂದು , ಸಾಕ್ಷಿಯ ಸಹಿಯನ್ನು ನಿಪಿ. 81(ಎ) ಎಂದು ಗುರುತಿಸಲಾಯಿತು. ಸಾಕ್ಷಿಯೂ 2 ಪೋಟೋಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಒಟ್ಟಾರೆಯಾಗಿ ನಿಪಿ. 82 ಎಂದು ಗುರುತಿಸಲಾಯಿತು.

33. ದಿ.20.02.2021 ರಂದು 1 ನೇ ಆರೋಪಿಯ ಮಧ್ಯಪಾನ ಖರೀದಿಸಲು ಮಾಡಿದಂತಹ ವ್ಯವಹಾರಕ್ಕೆ ಸಂಬಂಧಪಟ್ಟ ಮಾಹಿತಿಯನ್ನು ಪಡೆದುಕೊಳ್ಳಲು, ಆತನ

ಕರ್ನಾಟಕ ಬ್ಯಾಂಕ್ ಖಾತೆಗೆ, ನೀಡಿದ ಖಾತೆಗೆ ನೀಡಿದ **ATM** ಕಾರ್ಡ್ ನ ಮಾಹಿತಿಯನ್ನು ನೀಡುವಂತೆ, ವ್ಯವಸ್ಥಾಪಕರು, ಕರ್ನಾಟಕ ಬ್ಯಾಂಕ್, ರವರಿಗೆ ಮನವಿಯನ್ನು ಸಲ್ಲಿಸಿರುತ್ತೇನೆ. ಅವರು ಅದೇ ದಿನ ನಮ್ಮ ಮನವಿ ಪತ್ರದ ಮೇಲೆ **ATM** ನಂಬರ್ ನ್ನು ಬರೆದು ನೀಡಿರುತ್ತಾರೆ. ಸಾಕ್ಷಿಯೂ ಮನವಿ ಪತ್ರವನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ.44 ಎಂದು ಗುರುತಿಸಲಾಗಿದ್ದು, ಕರ್ನಾಟಕ ಬ್ಯಾಂಕ್ ನ ಹಿಂಬರಹವನ್ನು ನಿಪಿ.44(ಎ) ಎಂದು ಗುರುತಿಸಲಾಗಿರುತ್ತದೆ.

34. ನಂತರ ದಿ.26.02.2021 ರಂದು ಮಾಲು ಪಟ್ಟಿ ಸಂಖ್ಯೆ 21/21 ರಲ್ಲಿ ಅಮಾನತ್ತುಪಡಿಸಿಕೊಂಡ ಟವಲ್ ಮತ್ತು ಬೆಲ್ಟ್ ನಿಂದ ಮರಣೋತ್ತರ ಪರೀಕ್ಷೆಯಲ್ಲಿ ನಮೂದಿಸಿದಂತೆ ಕ್ರಮ ಸಂಖ್ಯೆ 1 ಮತ್ತು 3 ರಲ್ಲಿ, ಸದರಿ ವಸ್ತುಗಳಿಂದ ಉಸಿರುಗಟ್ಟಿಸಿದರೆ ಸಾಯುವ ಸಂಭವ ಇದೆಯೇ ಎಂದು ಮತ್ತು ಕ್ರಮ ಸಂಖ್ಯೆ 2 ರಲ್ಲಿಯ ಚಾಕುವಿನಿಂದ ಮೃತನ ತೊಡೆಯ ಮೇಲೆ ಆಗಿರುವ ಗಾಯ ಕತ್ತರಿಸಿದ ಗಾಯ ಆಗುವ ಸಾಧ್ಯತೆ ಇದೆಯೇ ಎಂದು, ಚಾಸಾ.37 ರವರ ಮುಖಾಂತರ ಚಾಸಾ.33 ರವರಿಗೆ ಕಳುಹಿಸಿಕೊಟ್ಟಿದ್ದು, ಚಾಸಾ.33 ರವರು ದಿ.03.03.2021 ರಂದು ತಮ್ಮ ಹೆಚ್ಚುವರಿ ವರದಿಯನ್ನು ನೀಡಿರುತ್ತಾರೆ. ಸದರಿ ವಸ್ತುಗಳನ್ನು ಪರೀಕ್ಷೆಯ ಬಳಿಕ , ಸೀಲು ಮಾಡಿ ವಾಪಾಸ್ ಕಳುಹಿಸಿಕೊಟ್ಟಿರುತ್ತಾರೆ. ಚಾಸಾ.33 ರವರು ತಮ್ಮ ವರದಿಯಲ್ಲಿ ನಾನು ಕೇಳಿದ 3 ಪ್ರಶ್ನೆಗಳಿಗೆ ಆಗುವ ಸಾಧ್ಯತೆ ಇದೆ ಎಂದು ವರದಿಯಲ್ಲಿ ನಮೂದಿಸಿರುತ್ತಾರೆ. ಸಾಕ್ಷಿಯೂ ಕೋರಿಕೆ ಪತ್ರವನ್ನು ನೋಡಿ ಗುರುತಿಸಿದ್ದು , ಅದನ್ನು ನಿಪಿ. 83 ಎಂದು , ಸಾಕ್ಷಿಯ ಸಹಿಯನ್ನು ನಿಪಿ.83(ಎ) ಎಂದು ಗುರುತಿಸಲಾಯಿತು. ಸಾಕ್ಷಿಯೂ ಚಾಸಾ.33 ರವರು ನೀಡಿದ ವರದಿಯನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ.49 ಎಂದು

ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ.49(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಯೂ ಸ್ಯಾಂಪಲ್ ಸೀಲ್ ನ್ನು ನೋಡಿ ಗುರುತಿಸಿದ್ದು , ಅದನ್ನು ನಿಪಿ.50 ಎಂದು ಗುರುತಿಸಲಾಗಿರುತ್ತದೆ. ಸಾಕ್ಷಿಯ ಸಹಿಯನ್ನು ನಿಪಿ. 50(ಬಿ) ಎಂದು ಗುರುತಿಸಲಾಯಿತು.

35. ನಂತರ ದಿ.01.03.2021 ರಂದು 1 ನೇ ಆರೋಪಿಯನ್ನು ಮೊಬೈಲ್ ನ ಸಾಲ ತೀರಿಸಿ , ಹೊಸ ಸಿಮ್ ಹಾಕಿ , **development mode** ಒಪನ್ ಮಾಡಲು ಪೊಲೀಸ್ ವಶಕ್ಕೆ ನಿಡುೀವಂತೆ ಘನ ನ್ಯಾಯಲಯಕ್ಕೆ ಕೋರಿಕೊಂಡಿರುತ್ತೇನೆ. ಕೋರಿಕೆಯ ಮೇರೆಗೆ ಮಾನ್ಯ ನ್ಯಾಯಾಲಯವೂ 1 ನೇ ಆರೋಪಿಯನ್ನು 2 ದಿನಗಳಿಗೆ ಪೊಲೀಸ್ ವಶಕ್ಕೆ ನೀಡಿರುತ್ತಾರೆ. ಸಾಕ್ಷಿಯೂ ರಿಮ್ಯಾಂಡ್ ಅರ್ಜಿಯನ್ನು ನೋಡಿ ಗುರುತಿಸಿದ್ದು , ಅದನ್ನು ನಿಪಿ. 84 ಎಂದು , ಸಾಕ್ಷಿಯ ಸಹಿಯನ್ನು ನಿಪಿ. 84(ಎ) ಎಂದು ಗುರುತಿಸಲಾಯಿತು.

36. ನಂತರ ದಿ.02.03.2021 ರಂದು 1 ನೇ ಆರೋಪಿಯ ಪೊಲೀಸ್ ವಶಕ್ಕೆ ಪಡೆದು , ಆತನ ಮುಂದುವೆರದ ಸ್ವ ಇಚ್ಛಾ ಹೇಳಿಕೆಯನ್ನು ದಾಖಲಿಸಿಕೊಂಡಿರುತ್ತೇನೆ.

37. ನಂತರ ಚಾಸಾ.2 ರವರ ಮುಖಾಂತರ 1 ನೇ ಆರೋಪಿಗೆ ಮೊಬೈಲ್ ಗೆ ಸಂಬಂಧಿಸಿದ ಸಾಲವನ್ನು ತೀರಿಸಿ , 1 ನೇ ಆರೋಪಿಗೆ ಸಂಬಂಧಿಸಿದ ಮೊಬೈಲ್ ಸಂಖ್ಯೆ 8660343740 ರ **duplicate sim** ನ್ನು ಪಡೆದುಕೊಂಡು, ದಿ.03.03.2021 ರಂದು ಠಾಣೆಯಲ್ಲಿ ಪಂಚರಾದ ರಾಜು ಮತ್ತು ಜಾನ್ಸ್ ನ್ ಚಾಸಾ.22 ವತ್ತು 23 ರ ಸಮಕ್ಷಮ ಮದ್ಯಾಹ್ನ 02.00–03.00 ಗಂಟೆಯವರೆಗೆ ಮಹಜರ್ ಮುಖಾಂತರ ಸಿಮ್ ಹಾಕಿ , 1 ನೇ ಆರೋಪಿಯ ಮೊಬೈಲ್ ಗೆ ಸಿಮ್ ನ್ನು ಅಳವಡಿಸಿರುತ್ತೇನೆ. ಆ ಕಾಲದಲ್ಲಿ ಎರಡು ಪೋಟೋಗಳನ್ನು ತೆಗೆಯಲಾಗಿರುತ್ತದೆ. ಸಾಕ್ಷಿಯೂ ಮಹಜರ್ ನ್ನು ನೋಡಿ

ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ. 36 ಎಂದು , ಸಾಕ್ಷಿಯ ಸಹಿಯನ್ನು ನಿಪಿ. 36(ಸಿ) ಎಂದು ಗುರುತಿಸಲಾಯಿತು. ಸಾಕ್ಷಿಯೂ ಎರಡು ಪೋಟೋಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಈಗಾಗಲೇ ನಿಪಿ. 37 ಮತ್ತು 38 ಎಂದು ಗುರುತಿಸಲಾಗಿರುತ್ತದೆ. ಸಿಮ್ ಅಳವಡಿಸಿ ಎಫ್ ಎಸ್ ಎಲ್ ಗೆ ಕಳುಹಿಸಲು ಅದನ್ನು ಬಿಳಿ ಬಟ್ಟೆಗ ಹಾಕಿ **M** ಎಂಬ ಅಕ್ಷರದಿಂದ ಸೀಲು ಮಾಡಲಾಯಿತು. ಅದೇ ದಿನ 1 ನೇ ಅರೋಪಿಯು ತಾವು ಕೊಲೆ ಮಾಡುವ ಮೊದಲು, ಮದ್ಯಪಾನ ಖರೀದಿಸಿದ ಸ್ಥಳವನ್ನು ತೋರಿಸಿದ್ದು, ಸದರಿ ಸ್ಥಳವೂ ಲಷ್ಕರ್ ಮೊಹಲ್ಲಾ, ಬಿ ಎನ್ ರಸ್ತೆಯ , ಭುವನೇಶ್ವರಿ ಬಾರ್ ಅಂಡ್ ರೆಸ್ಟೋರೆಂಟ್ ಮುಂಭಾಗ ಖರೀದಿಸಿದ ಸ್ಥಳವೆಂದು ತೋರಿಸಿದ್ದು, ಸದರಿ ಸ್ಥಳವನ್ನು ಪುಷ್ಪರಾಜ್ ಮತ್ತು ಕುಮಾರ್ ರವರ ಸಮಕ್ಷಮ ಬೆಳಿಗ್ಗೆ 08.0–0830 ರವರೆಗೆ ಮಹಜರ್ ಕ್ರಮವನ್ನು ಜರುಗಿಸಿರುತ್ತೆನೆ. ಸಾಕ್ಷಿಯೂ ಸದರಿ ಮಹಜರ್ ನ್ನು ನೋಡಿ ಗುರುತಿಸಿದ್ದು, ಸದರಿ ದಾಖಲೆಯನ್ನು ನಿಪಿ. 85 ಎಂದು, ಸಾಕ್ಷಿಯ ಸಹಿಯನ್ನು ನಿಪಿ.85(ಎ) ಎಂದು ಗುರುತಿಸಲಾಯಿತು. ಸದರಿ ಮಹಜರ್ ನ ಸಹಿ ಮಾಡುವ ಕಾಲಕ್ಕೆ ಸಹಿಯ ಬಳಿ ದಿ.03.03.2021 ಎಂದು ನಮೂದಿಸುವ ಬದಲಾಗಿ ದಿ.15.12.2021 ಎಂದು ಕಣ್ ತಪ್ಪಿನಿಂದ ನಮೂದಿಸಲಾಗಿರುತ್ತದೆ ಎಂದು ಸಾಕ್ಷಿ ನುಡಿಯುತ್ತಾರೆ.

38. ನಂತರ 1 ನೇ ಆರೋಪಿಯನ್ನು ನ್ಯಾಯಾಂಗ ಬಂಧನಕ್ಕೆ ಸಲ್ಲಿಸಿರುತ್ತೇನೆ. ನಂತರ ಅದೇ ದಿನ ಚಾಸಾ.13 ರವರಿಂದ ಕಲಂ 65(ಬಿ) ಅಡಿಯ ಪ್ರಮಾಣ ಪತ್ರವನ್ನು ಪಡೆದುಕೊಂಡಿರುತ್ತೇನೆ.

39. ನಂತರ ದಿ.06.03.2021 ರಂದು 1 ನೇ ಆರೋಪಿಯ ಮೊಬೈಲ್ ಗೆ ನಕಲಿ ಸಿಮ್ ಹಾಕಿ **development mode** ಆನ್ ಮಾಡಿದ್ದರಿಂದ **data extract**

ಮಾಡುವ ಸಂಬಂಧ, ಅಶೋಕಪುರಂ ಪೊಲೀಸ್‌ಠಾಣೆ ಯ **CEN** ವಿಭಾಗದಲ್ಲಿ , ಪಂಚರಾದ ಚಾಸಾ.20 ಮತ್ತು 21 ರವರ ಸಮಕ್ಷಮ **data extract** ಮಹಜರ್ ನ್ನು ಜರುಗಿಸಿ, ಆ ಕಾಲದಲ್ಲಿ ಚಾಸಾ.36 ರವರು ಆಂಟಿ ಅನಲೈಸರ್ ಅಳವಡಿಸಿ , ಯುಪೆಡ್ ಸಾಫ್ಟವೇರ್ ಮುಖಾಂತರ ಮೊಬೈಲ್ ನಲ್ಲಿ ಇದ್ದ **data extract** ಮಾಡಿ ಅದನ್ನು **pendrive** ಗೆ ಅಳವಡಿಸಿ ವರದಿಯನ್ನು ನೀಡಿರುತ್ತಾರೆ. ಸದರಿ ಮಹಜರ್ ನ್ನು ಸಂಜೆ 04.00–05.00 ಗಂಟೆವರೆಗೆ ಜರುಗಿಸಿರುತ್ತೇನೆ. ಸದರಿ ಮೊಬೈಲ್ ನ್ನು ಬಿಳಿ ಚೀಲಕ್ಕೆ ಹಾಕಿ **M** ಎಂಬ ಅಕ್ಷರದಿಂದ ಸೀಲು ಮಾಡಿರುತ್ತೇನೆ. ಆ ಸಮಯದಲ್ಲಿ ಪೋಟೋಗಳನ್ನು ತೆಗೆದಿರುತ್ತೇನೆ. ಸಾಕ್ಷಿಯೂ ಮಹಜರ್ ನ್ನು ನೋಡಿ ಗುರುತಿಸಿದ್ದು , ಅದನ್ನು ಈಗಾಗಲೇ ನಿಪಿ. 32 ಎಂದು ಗುರುತಿಸಲಾಗಿದ್ದು , ಸಾಕ್ಷಿಯ ಸಹಿಯನ್ನು ನಿಪಿ.32(ಡಿ) ಎಂದು ಗುರುತಿಸಲಾಯಿತು. ಸಾಕ್ಷಿಯೂ ವರದಿಯನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ.59 ಎಂದು ಗುರುತಿಸಲಾಗಿದ್ದು , ಸಾಕ್ಷಿಯ ಸಹಿಯನ್ನು ನಿಪಿ.59(ಎ) ಎಂದು ಗುರುತಿಸಲಾಯಿತು. ಸಾಕ್ಷಿಯೂ ಪೋಟೋಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಈಗಾಗಲೇ ನಿಪಿ.33 ಮತ್ತು 34 ಎಂದು ಗುರುತಿಸಲಾಗಿರುತ್ತದೆ.

40. ಅದೇ ದಿನ ಚಾಸಾ.20, 21 ಮತ್ತು 36 ರವರ ಹೇಳಿಕೆಗಳನ್ನು ದಾಖಲಿಸಿಕೊಂಡಿರುತ್ತೇನೆ.

**(ಈ ಹಂತದಲ್ಲಿ ನ್ಯಾಯಾಲಯದ ಸಮಯ ಮುಗಿದಿದ್ದರಿಂದ, ಮುಂದುವರೆದ ಮುಖ್ಯ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು.)**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಿಸಲಾಯಿತು)**

**ಓ ಹೇ ಕೇ ಸ ಇ ಎ ಒ**

**3ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು**
**ಮೈಸೂರು.**